ದೃಷ್ಟಿ ತೆಗೆಯುವಳು. ದೃಷ್ಟಿ ಬೀಳಲು ಹೊರಗಿನವರ ಕಣ್ಣೇ ಆಗಿರಬೇಕಿಲ್ಲವಲ್ಲ! 'ತಾಯ್ಕಣ್ಣು, ನಾಯಿ ಕಣ್ಣಲ್ಲವೇ?' ನಂತರ ತಾನೂ ತಯಾರಾಗಿ, ಗಂಗೆ ದೇವಸ್ಥಾನಕ್ಕೆ ಮಗಳೊಂದಿಗೆ ಹೋಗಬೇಕಾಗುತ್ತದೆ. ಆಗ ಯುದ್ಧ ಭೂಮಿಗೆ ಹೊರಡುವಂತೆ ಆಗಿರುತ್ತದೆ ಅವಳ ಮನಸ್ಸು. ಈ ದಿನ ಅಲ್ಲಿ ತನಗೂ, ಮಗಳಿಗೂ ಯಾರ ಮೂದಲಿಕೆ ಭರ್ಜಿ, ಬಾಣ ತಯಾರಾಗಿರುತ್ತೊ ಏನೊ?

ಬೀದಿ ನಾಯಿಯಂತೆ ಎಲ್ಲರೂ ಬಿಸುಟ ಎಂಜಲು ತಿನ್ನಲು ಹೊರಟರೂ ಉಂಡ ಜನ ಕಲ್ಲು ಬೀಸಿಕೊಂಡು ಬರುತ್ತಾರಲ್ಲವೆ?! ಯಾರು ಏನೇ ಚುಚ್ಚಿದರೂ ನನ್ನ ಜೀವನ ನನಗೆ ಅನ್ನುವ ಮೊಂಡುತನ ಇರದಿದ್ದರೆ, ಅವಳೆಂದೊ ಮಗುವಿನೊಂದಿಗೆ ಪಾಳು ಬಾವಿ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು.

ಇವರಿಬ್ಬರೂ ಸುನಂದ ಬನ್ನಪ್ಪನವರ ಮನೆ ಸಮೀಪಿಸಿದರು. ಕಾವಲುಗಾರನಿಗೆ ಗಂಗೆ ಪರಿಚಯ ಇದ್ದುದರಿಂದ ಸಲೀಸಾಗಿ ಕಾಂಪೌಂಡಿನ ಒಳಹೊಕ್ಕಳು. ಆ ಪುರಾತನ ಮನೆಯನ್ನು ಒಡತಿ ಚೆನ್ನಾಗಿ ಪೋಷಣೆ ಮಾಡಿಟ್ಟು ಕೊಂಡದ್ದರಿಂದ ಸುಣ್ಣ, ಬಣ್ಣ ಮಾಸದೆ ಒಪ್ಪವಾಗಿ ಇದೆ. ಬನ್ನಪ್ಪರ ಎರಡು ಗಂಡು ಮಕ್ಕಳು ಅಲ್ಪ ಸ್ವಲ್ಪ ರಾಜಕೀಯದಲ್ಲಿ ಇದ್ದರೂ ಅವರು ವಂಶಸ್ಥರ ಭೂಮಿಯಲ್ಲೇ ಇನ್ನೂ ನೆಲೆಸಿ ಬಿಟ್ಟಿದ್ದಾರೆ. ದೊಡ್ಡವನು ನಂಜನಗೂಡಿನ ಸಮೀಪದ ಕಪಿಲಾನದಿ ತೀರದ ಮೂಢಹಳ್ಳಿಯಲ್ಲಿ ವರ್ಷಕ್ಕೆ ಮೂರು ಬಾರಿ ಕಟಾವಿಗೆ ಬರುವ ಭತ್ತದ ಸಮುದ್ರದಲ್ಲಿ ತನ್ನ ವಾಸ್ತವ್ಯ ಇಟ್ಟುಕೊಂಡಿದ್ದರೆ, ಇನ್ನೊಬ್ಬ ಮಗ ಸೋಮನಾಥಪುರದ ದೇವಾಲಯದ ಸುತ್ತಮುತ್ತ ಇರುವ ಎಕರೆಗಟ್ಟಲೆ ಮಾವಿನ ತೋಪಿನ ಒಡೆಯನಾಗಿ ತೆಂಗು, ಕಂಗು, ಬಾಳೆ ಅಂತ ತೋಟಗಾರಿಕೆ ಮಾಡುತ್ತ ಅಲ್ಲೇ ಸಂಸಾರ ಸಮೇತ ಸಂತೋಷವಾಗಿದ್ದಾನೆ. ಇಬ್ಬರ ಮಕ್ಕಳೂ ಊಟಿಯ 'ತೌಡೇಲ್' ಸ್ಕೂಲಿನಲ್ಲಿ ಓದುತ್ತ ಅಲ್ಲಿನ ಹಾಸ್ಟೆಲ್‌ನಲ್ಲಿದಾರೆ. ಮೈಸೂರು ಸಮೀಪವೇ ಇದ್ದುದರಿಂದ ಸುನಂದ ಬನ್ನಪ್ಪ ಅವರು ವರ್ಷಕ್ಕೆ ಒಮ್ಮೆಯಾದರೂ ಹೋಗಿ ಮಕ್ಕಳ ಜೊತೆ ಇದ್ದು ಬರುವರು.

ಮೈಸೂರಲ್ಲಿ ಇದ್ದದ್ದು ಒಬ್ಬರೇ ಆದರೂ ಆ ವಿಶಾಲವಾದ ಬಂಗ್ಲೆ ಕಾಂಪೌಂಡು ಬಿಕೊ ಅನ್ನಿಸುತ್ತಿರಲಿಲ್ಲ. ಕೈತೋಟ ಅಚ್ಚುಕಟ್ಟಾಗಿದ್ದು, ಹೆಮ್ಮರಗಳ್ಯಾವುವೂ ಇಲ್ಲದಿದ್ದರಿಂದ ಬಿಸಿಲು ಅಲ್ಲಿ ನರ್ತಿಸುತ್ತಿತ್ತು. ಗಂಗೆಯ ಮುದ್ದಿನ ಇಂದ್ರಾಗಾಂಧೀ ತೋಟದಲ್ಲಿ ಅರಳಿದ ಹೂಗಳು, ಹೂ ಮೇಲೆ ಹಾರಾಡುತ್ತಿದ್ದ ಚಿಟ್ಟೆಗಳನ್ನು ನೋಡಿ ಆನಂದ ವ್ಯಕ್ತಪಡಿಸುತ್ತಾ ಕುಣಿದಳು. ನೆಗೆದಳು. ಮನಸ್ಸು ಉಕ್ಕಿ ಅವಳ ಅಂಗಾಂಗಗಳು ಖುಷಿಯನ್ನು ಹೊರಚೆಲ್ಲಿದವು.

'ಯವ್ವಿ!... ಇಂದ್ರಾಗಾಂಧೀ... ಹಂಗೆಲ್ಲಾ ಮುಳ್ಳು ಹಿಡಿದವಲ್ಲಾಂಗ ಕುಣಿಬಾರವ್ವಾ.... ನೀ ಹಿಂಗೆಲ್ಲಾ ಆಡ್ತಿದ್ರೆ... ಇಲ್ಲಿ ಪೊಲೀಸು ಮಂದಿ ಅದಾರ. ನಿನ್ನ ಹಿಡ್ಕೊಂಡು ಹೋಗ್ತಾರ...' ಎಂದು ಅವಳನ್ನು ತಡೆಯಲು ಗಂಗೆ ಯತ್ನಿಸಿದಳು. ಅವಳು ಮಾತ್ರ ಕುಣಿಯುತ್ತಲೇ ತಾಯ ಹಿಂದೆ ಹೋದಳು.

ಇಬ್ಬರೂ ಮುಂದಿನ ಹೆಬ್ಬಾಗಿಲ ಬಳಿಗೆ ಬಂದರು. ಅದನ್ನು ದಾಟಿದರೆ ಹಿಂದಿನ ಕಾಲದ ಓಣಿಯಂತಹ ತೆರೆದ ವರ್‍ಯಾಂಡವಿತ್ತು. ಅದಕ್ಕೆ ಕಬ್ಬಿಣದ ಜಾಲಂದರ ಹಾಕಿ, ಸುರಕ್ಷತೆ ಉಂಟು ಮಾಡಲಾಗಿತ್ತು.

ಗಂಗೆ, ಒಳಹೋಗದೆ ಅಲ್ಲೇ ನಿಂತಳು. ಇನ್ನೊಂದು ಗಳಿಗೆಯಲ್ಲಿ ಆ ಮನೆಯ ಕೆಲಸದವಳು ಅಲ್ಲಿ ಕಾಣಿಸಿಕೊಂಡಳು.

ಗಂಗೆ ಆಕೆಯನ್ನು ಕೇಳಿದಳು, 'ಅಮ್ಮಾವ್ರು ಮನೀಲಿ ಅದಾರಾ?'

'ಇಲ್ಲ .... ಇಲ್ಲೇ ಎಲ್ಲೋ ಹೋಗಿದ್ದಾರೆ.... ಬರ್‍ತಾರೆ'

'ನಾನು ಒಳೀಕೆ ಹೋಗಿ ಅವ್ರಿಗೆ ಕಾಯ್ತಿನಿ... ಅವ್ರು ಕೂಟ ಯಾನೋ ಮಾತಾಡ್ಲಿಕ್ಕೆ ಉಂಟು...'

'ಬಂದು ಕೂತ್ಕೋಳವ್ವ...'

ವರ್‍ಯಾಂಡದಲ್ಲಿ ಹೋಗಿ ಕುಳಿತಾಗ ಒಳಗಿನ ಹಜಾರ ಬಾಗಿಲಿನಿಂದ ಅಷ್ಟಿಷ್ಟು ಕಂಡಿತು. ಗಂಗೆ ಈ ಮನೆಗೆ ಬಂದಾಗಲೆಲ್ಲ ಆ ಹಜಾರ ಕಂಡು ಬೆರಗಾಗುತ್ತಿದ್ದಳು. ಹಳೇ ಕಾಲದ ಕೆಂಪು ಕಾವಿಯ ನೆಲ. ಈಗಲೂ ಫಳಗುಟ್ಟುತ್ತಿತ್ತು. ನಡುವೆ ಒಂದು ದೊಡ್ಡ ರತ್ನಗಂಬಳಿ ಹಾಸಿದ್ದರು. ಅದರ ಸುತ್ತು ಹಳೇ ಕಾಲದ್ದೇ ಮಜಬೂತಾದ ಸೋಫಾ ಸೆಟ್, ಸೂರಿನಿಂದ ಇಳಿಬಿದ್ದ ಸ್ಪರ್ಶಮಣಿ ದೀಪ ಗುಚ್ಛಗಳು, ಗಾಜಿನ ಕಪಾಟಿನ ತುಂಬಾ ದಪ್ಪದಪ್ಪ ಪುಸ್ತಕಗಳು, ಕಪಾಟಿನ ಮೂಲೆಯಲ್ಲಿ ದೊಡ್ಡದಾದ ಹಿತ್ತಾಳೆ ಕುಂಡದಲ್ಲಿ ಗರಿಬಿಚ್ಚಿದ ಹಸಿರೆಲೆ ಗಿಡ ಇಟ್ಟಿದ್ದರು. ಗೋಡೆ ಮೇಲೆ ಎತ್ತರದಲ್ಲಿ ಸಾಲಾಗಿ ದೊಡ್ಡ ದೊಡ್ಡ ಮನುಷ್ಯರ ಚಿತ್ರಗಳನ್ನು ಮರದ ಪಟ್ಟಿ ಆಶ್ರಯಕೊಟ್ಟು ನೇತು ಹಾಕಿದ್ದರು. ಅದರಲ್ಲಿ ಗಾಂಧೀಜಿ, ನೆಹ್ರು, ಸುಭಾಷ್ಚಂದ್ರ ನಾಲ್ವಡಿ ಕೃಷ್ಣರಾಯರು, ಈ ಮನತನದ ಹಿರಿ ವಂಶಸ್ಥರು ಇಣುಕುತ್ತಿದ್ದರು. ಹತ್ತೊಂಬತ್ತನೇ ಶತಮಾನದ ಆ ವಂಶದ ಹಿರಿಯರು ಕೊಟ್ಟ ಉಡುಗೆ ತೊಡುಗೆಗಳು, ಒಡವೆಗಳು ಈಗ ಎಲ್ಲೂ ಕಾಣಸಿಗದಂತಹವು. ಅವುಗಳ ಜೊತೆ ಜೊತೆಗೆ ಕೆಲವಾರು ಪ್ರಕೃತಿ ಚಿತ್ರಗಳು ಇವೆಲ್ಲಾ ವರ್ಷಾಂತರದಿಂದ ಮೇಲೆ ಹೋಗಿ ಕುಳಿತುಬಿಟ್ಟಿವೆ. ಆದರೆ ಅವುಗಳ ಧೂಳು, ಇಲ್ಲಣ ಒರಸಿ ಹೊಸತೆಂಬಂತಿತ್ತು. ಅದರ ಕೆಳಗೇ ಇದ್ದ ವಿದ್ಯುತ್ ದೀಪಸ್ಥಂಭದ ಬೆಳಕಿಗೆ ಮಿಂಚುತ್ತಿತ್ತು ಒಂದು ಸುಂದರ ಮಹಿಳೆಯ ಈಚಿನ ಸೇರ್ಪಡೆಯ ಚಿತ್ರ. ಗಂಗೆ ಅದನ್ನು ತೋರಿಸುತ್ತಾ ಮಗಳಿಗೆ ಹೇಳಿಕೊಟ್ಟಳು.

'ಇಕಾ ನೋಡು...! ಅಕೀನೂ ಇಂದ್ರಾ ಗಾಂಧೀ...'

ಹುಡುಗಿ ಕಕ್ಕಾಬಿಕ್ಕಿಯಾಗಿ ನೋಡೀತು. 'ನನ್ನ ತಸ್ವೀರಾ ಏನು...? ನಾ ಸ್ಯಾಲೆ ಉಟ್ಟಿಲ್ಲವ್ವಾ...? ಜಡಿ ಕತ್ತರಿಸಿಲ್ವಲ್ವಾ....!'

ಗಂಗೆಗೆ ನಗು ಬಂದಿತು. 'ಇದು ನೀನಲ್ಲವ್ವಾ... ಈಕಿ ಈ ಊರಾಗೇ ಇಲ್ಲ... ಆದ್ರೆ ಬಾಳ ಒಳ್ಳೇವ್ರು ಅಂತ ಅವ್ವ, ಸುನಂದವ್ವ ಏಳದ್ರು... ಅದ್ಕೇ ನಿಂಗೆ ಆಕಿ ಹೆಸ್ರು ನಾ ಇಟ್ಟೇ... ಛಲೊ ಇದಾಳಲ್ಲಾ ಈಕೀ...?'

'ಅದಾಳೆ...' ಎಂದು ಹೇಳಿದ ಹೊಸ ಇಂದ್ರಾ ಗಾಂಧೀ ಕಣ್ಣು ಎಂದಿನಂತೆ ಚಂಚಲವಾಯಿತು. ಅವಳ ಕಣ್ಣಿಗೆ ಬಿದ್ದದ್ದು ಈಗ, ಬಾಗಿಲ ನೇರಕ್ಕೆ ಹಾಕಿದ್ದ ಜಿಂಕೆಯ ಕೊಂಬು, ತಾಯನ್ನು ಕರೆದು ಹೇಳಿದಳು.

'ಯವ್ವಾ... ಅದ್ಯಾನು...?'

'ಇದು... ಜಿಂಕಿ ಕೊಂಬವ್ವಾ... ಇದು ಕಾಡಲ್ಲಿರ್‍ಲಿಕ್ಕುಂಟು... ಆಕಳು, ಎಮ್ಮೆಗೆ ಇರೊಕೊಂಬು ನೀ ನೋಡಿದ್ದಿ ಅಲ್ವಾ... ಹಂಗೇ ಇದಕ್ಕೂ ಕೊಂಬು ಇರತ್ತೈತಿ.'

ಅಷ್ಟರಲ್ಲಿ ಮತ್ತೊಮ್ಮೆ ಆ ಮಗೂನ ಮನಸ್ಸು ಚಿಟ್ಟೆಯಂತೆ ಅಲ್ಲಿಂದಲೂ ಹಾರಿ ಅಲ್ಲಿದ್ದ ನಿಲಿವು ಗನ್ನಡಿಯತ್ತ ಹೋಗಿಬಿಟ್ಟಿತು. ಅಷ್ಟು ದೊಡ್ಡ ಕನ್ನಡಿ ಮುಂದೆ ಅವಳು ನಿಂತದ್ದೇ ಇಲ್ಲ. ಹೋಗಿ ನೋಡಿಕೊಂಡಾಗ ತಮ್ಮಿಬ್ಬರ ಪ್ರತಿಛಾಯೆ ನೋಡಿ ಭಯವಾಯಿತು.

'ಯವ್ವಾ...! ಅಲ್ಲಿ ನೋಡಾ... ನಿನ್ಹಂಗ... ನನ್ಹಂಗ...' ಭದ್ರವಾಗಿ ತಾಯ ಕೈಯನ್ನು ಹಿಡಿದುಕೊಂಡಳು.

'ಆಯ್... ಬಿಡವ್ವಾ... ಅದಕ್ಯಾಕ ಅಂಜ್ತೀಯ... ಅದು ನಾವೇನ... ದಮ್ಮ ಕನ್ನಡಿದಾಗ ನಾವು ಪೂರಾ ಕಾಣ್ಣಿಕ್ಕ ಹತ್ತೇವಿ... ಅಷ್ಟೇಯ...' ಎಂದು ಅವಳಿಗೆ ಸಮಾಧಾನ ಹೇಳಿ, ಅವಳನ್ನು ತೆರೆದಿದ್ದ ಕಿಟಕಿ ಬಳಿ ಕರೆದೊಯ್ದಳು. ಅಲ್ಲಿಂದ ಆ ಬಂಗ್ಲೆಯ ಕೈತೋಟ ಅಂದವಾಗಿ ಕಾಣುತ್ತಿತ್ತು. ಕತ್ತರಿಸಿ ಒಪ್ಪವಾಗಿ ಬೆಳೆಸಿದ್ದ ಹುಲ್ಲು ಹಾಸಿನ ಅಂಚಿನ ಸುತ್ತಾ ಬಣ್ಣ ಬಣ್ಣದ ಹೂಗಳು ಅರಳಿ ನಿಂದಿದ್ದವು. ಮತ್ತೊಂದು ಪಕ್ಕಕ್ಕೆ ಕಲ್ಲು ಮಂಟಪಕ್ಕೆ 'ಬೋಗನ್ ವಿಲ್ಲಾ' ಬಳ್ಳಿ ಹಬ್ಬಿಸಿದ್ದರು. ಅದರಾಚೆ ಪಾರಿಜಾತ, ದಾಸವಾಳದ ಗಿಡಗಳು ಮತ್ತು ಮಲ್ಲಿಗೆ ಹೂವೂ ಇತ್ತು. ಪ್ರಾಚೀನವಾದ ಈ ಗಿಡಗಳು ಇನ್ನೂ ಆಯಾ ಋತುವಿಗೆ ತಕ್ಕಂತೆ ಹೂಗಳನ್ನು ಹಡೆಯುತ್ತಲೇ ಹೋಗಿದ್ದಳು. ಕಾಂಪೌಂಡಿನ ನಾಲ್ಕು ಮೂಲೆಗಳಲ್ಲಿ ಕಸಿ ಹಾಕದ ಹಳೇ ತೆಂಗಿನ ಮರಗಳು ನಾವು ನೂರಾರು ವರ್ಷ ಫಲ ಕೊಡಬಲ್ಲೆವು ಎಂದು ಎತ್ತರಕ್ಕೆ ತಲೆ ನರಿಗೆ ಗರ್ವದಿಂದ ನಿಂತಿದ್ದವು. ಮೂಲೆಯಲ್ಲೊಂದು ಮಾಮರವೂ ಹರಡಿತ್ತು. ಇಂದ್ರಾ ಗಾಂಧೀ ಈ ಮರ, ಆ ಗಿಡಗಳಿಗಿಂತ ಕಣ್ಣಿಗೆ ಹತ್ತಿರವಾಗಿ ಅರಳಿನಿಂತ ಗುಲಾಬಿ ಹೂಗಳನ್ನು ನೋಡಿ ತಾಯಿಯನ್ನು ಎಳೆದು ಬೇಡಿದಳು.

'ಯವ್ವಾ... ಅದು... ನಂಗ ಬೇಕೂ...'

'ಯಾನ್ವವ್ವಾ...?'

'ಇಕಾ... ಈ ಹೂವು ಛಲೊ ಅದ... ನಂಗದು ಬೇಕು... ' ಎಂದು ಹೂವನ್ನು ಕೀಳಲು ಓಡಿಯೇಬಿಟ್ಟಳು. ಹಿಂದೆಯೇ ಓಡಿ ಗಂಗೆ ಅವಳನ್ನು ತಡೆದಳು. ತತ್‌ಕ್ಷಣ ಆ ಪುಟ್ಟ ಹುಡಿಗಿಯ ದೊಡ್ಡ ರೋಧನ ಪ್ರಾರಂಭವಾಗಿ ಹೋಯಿತು.

'ಉಷ್!!... ಹಂಗೆಲ್ಲಾ ಇಲ್ಲಿ ಗದ್ಲ ಮಾಡಿ ಅಳಬಾರದವ್ವಾ... ಸುಮ್ಮನಾಗು... ಅದೊ... ಅಲ್ನೋಡ... ಅವ್ರು ಬರ್‍ಲಿಕ್ ಹತ್ತಾರೆ... ಹೂವು ಕಿತ್ರ ಅವ್ರು ಹೊಡೀತಾರ...!'

ಅದಕ್ಕೆ ತಕ್ಕ ಹಾಗೆ ಸುನಂದ ಬನ್ನಪ್ಪನವರ ಆಗಮನವಾಗುತ್ತಲಿತ್ತು. ಅವ್ರನ್ನು ಕಂಡೊಡನೆ ಇಂದ್ರಾ ಗಾಂಧಿ ದನಿ ಅಡಗಿ ಹೋಯಿತು!

(ಸಶೇಷ)